ಸುಕನ್ಯಾ
ಪಿಡಬ್ಲೂ-1

ಸಾಕ್ಷಿಗೆ ದಿನಾಂಕಃ 30.07.2024 ರಂದು ಪ್ರಮಾಣ ವಚನ ನೀಡಲಾಯಿತು.
ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಬಿ ವಕೀಲರವರಿಂದಃ

ನಿಪಿ-8 ರ ದಾವೆಯು 2013 ರ ಕ್ರಯದ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿರುವ ದಾವೆಯಾಗಿರುತ್ತದೆ ಎಂದರೆ ಸರಿ. ನಿಪಿ-8 ರ ದಾವೆಯ ಕ್ರಯದ ಕರಾರು ಪತ್ರದಲ್ಲಿ ಚಲುವೇಗೌಡರಿಗೆ ರೂ 15,00,000/- ಗಳನ್ನು ಕೊಟ್ಟಿರುತ್ತೇನೆ. ದಿನಾಂಕ 27.08.2013 ರ ಬೋಗ್ಯ ಪತ್ರದಲ್ಲಿ ನಾನು ಚಲುವೇಗೌಡರಿಗೆ ರೂ 2,00,000/- ಗಳನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಒಂದೇ ಬಾರಿ ನಾನು ರೂ 15,00,000/- ಗಳನ್ನು ಚಲುವೇಗೌಡರಿಗೆ ಕೊಟ್ಟಿರುತ್ತೇನೆ ಅದನ್ನು 2 ದಾಖಲೆಗಳಲ್ಲಿ ಕಡಿಮೆ ಹಣವನ್ನು ತೋರಿಸಿ ದಾಖಲೆಗಳನ್ನು ಬರೆಸಿರುತ್ತೇವೆ. ನಿಪಿ-8 ದಾವೆಯಲ್ಲಿ ಚಲುವೇಗೌಡ ಮತ್ತು ಇತರರಿಂದ ರೂ 15,10,000/- ಗಳನ್ನು ರಾಜಿ ಮಾಡಿಕೊಳ್ಳುವ ಪೂರ್ವದಲ್ಲೇ ಪಡೆದಿರುವುದಾಗಿ ನನ್ನ ರಾಜಿ ಮೆಮೋದಲ್ಲಿ ತೋರಿಸಿರುತ್ತೇನೆ ಎಂದರೆ ಸರಿ.

ಸುಕನ್ಯಾ
ಪಿಡಬ್ಲೂ-1

ಸದರಿ ಮೊತ್ತವನ್ನು ನಗದು ರೂಪದಲ್ಲೇ ಚಲುವೇಗೌಡ ಮತ್ತು ಇತರರು ಕೊಟ್ಟಿರುತ್ತಾರೆ. ಚಲುವೇಗೌಡ ಮತ್ತು ಇತರರು ಒಂದೇ ಬಾರಿ ನನಗೆ 15 ಲಕ್ಷ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಒಂದೇ ಬಾರಿ ಕೊಟ್ಟಿರುತ್ತಾರೆ. ಸದರಿ ರೂ 15 ಲಕ್ಷವನ್ನು ನಾವು ಮನೆ ನಿರ್ಮಾಣ ಮಾಡುವ ಸಲುವಾಗಿ ನಾವು ಮನೆಯಲ್ಲಿ ಇಟ್ಟಿದ್ದೇವು. ಮನೆ ನಿರ್ಮಾಣ ಮಾಡಲು ಸುಮಾರು 45 ಲಕ್ಷ ಆಗಿರುತ್ತದೆ, ದಾವೆಯಿಂದ ಬಂದಿರುವ ರೂ 15 ಲಕ್ಷದಲ್ಲಿ ಆರೋಪಿಗೆ ಹಣವನ್ನು ನೀಡಿ ಉಳಿಕೆಯ ಹಣವನ್ನು ಮನೆ ನಿರ್ಮಾಣ ಮಾಡಲು ಬಳಕೆ ಮಾಡಿರುತ್ತೇವೆ. ರೂ 15 ಲಕ್ಷ ಗಳ ಪೈಕಿ ಆರೋಪಿಗೆ ಹಣವನ್ನು ಕೊಟ್ಟು ಉಳಿಕೆಯ 9 ಲಕ್ಷ ರೂ.ಗಳನ್ನು ಮನೆ ನಿರ್ಮಾಣ ಮಾಡಲು ಬಳಕೆ ಮಾಡಿರುತ್ತೇವೆ.

2. ಪಾಂಡವಪುರ ನ್ಯಾಯಾಲಯದಲ್ಲಿ ಚೆಕ್ಕಿಗೆ ಸಂಬಂಧಪಟ್ಟಂತೆ 2 ಕೇಸುಗಳನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಣದ ಲೇವಾದೇವಿ ವ್ಯವಹಾರ ಮತ್ತು ಚೀಟಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ಮುಂದುವರಿದ ಪಿರ್ಯಾದುದಾರರ ವಿಚಾರಣೆ ಇಲ್ಲ ಎಂದು ವಕೀಲರು ನುಡಿದಿರುತ್ತಾರೆ.

ಸಾ. ಓ. ಹೇ. ಸ. ಒ

2 ನೇ ಅಪರ ಸಿವಿಲ್ ಜೆಡ್ಜ್ ಮತ್ತು ಜೆ ಎಂ ಎಫ್ ಸಿ,
ಪಾಂಡವಪುರ